# ಬೌದ್ಧ ಧಮ್ಮ ಮತ್ತು ಮಹಿಳೆ

**ಪವಿತ್ರ ಎಸ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ನರಗುಂದ, ಗದಗ.

DOI: https://doi.org/10.5281/zenodo.15504377

## ABSTRACT:

ಈ ಲೇಖನದಲ್ಲಿ ಬುದ್ದನ ಮೇಲಿನ ಕೆಲವು ಆರೋಪಗಳಿಗೆ ಉತ್ತರವನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಅದಕ್ಕೆ ಅಂಬೇಡ್ಕರ್ ಅವರು ತಮ್ಮ ಬರಹ ಮತ್ತು ಭಾಷಣಗಳಲ್ಲಿ ಆರೋಪಗಳಿಗೆ ವಿವರಣೆ ನೀಡಿದ್ದಾರೆ. ಅದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಬುದ್ದ ತನ್ನ ಹೆಂಡತಿಯಾದ ಯಶೋಧರೆಯ ಅನುಮತಿ ಕೇಳದೆ ತೊರೆದು ಬಂದ, ಮಗನ ಮುಖವನ್ನು ಸಹ ನೋಡಲಿಲ್ಲ. ಬುದ್ದ ತನ್ನ ಸಂಘದಲ್ಲಿ ಮಹಿಳೆಯರಿಗೆ ಪ್ರವೇಶ ನೀಡಲಿಲ್ಲ. ಬುದ್ದ ತನ್ನ ಸಂಘದವರಿಗೆ ಮಹಿಳೆಯರ ವಿಷಯದಲ್ಲಿ ಸದಾ ಜಾಗ್ರತೆ ವಹಿಸಬೇಕು ಎಂದು ಹೇಳುತ್ತಿದ್ದ ಎಂಬುದು ಬುದ್ದನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಕಾರಣವಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ವೈದಿಕ ಧರ್ಮ ಪ್ರಣೀತ ಮನುಸ್ಮೃತಿ, ರಾಮಾಯಣ ಮತ್ತು ಮಹಾಭಾರತ ಕೃತಿಗಳು ಮಹಿಳೆಯರನ್ನು ಹೇಗೆ ಚಿತ್ರಿಸಿವೆ, ಅದರಲ್ಲಿ ಮಹಿಳೆಯರ ಸ್ಥಾನಮಾನಗಳೇನು? ಎಂಬುದನ್ನು ತುಲನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶ್ರೇಷ್ಠತೆಯ ಅಮಲು ಮಹಿಳೆಯರ ಉನ್ನತಿಗೆ ತೊಡಕಾಗಿದೆ ಎಂಬುದು ಸಮಾಜಕ್ಕೆ ಸ್ವತಃ ಮಹಿಳೆಯರಿಗೂ ಬೇಡದ ವಿಷಯವಾಗಿದೆ.

## KEYWORDS:

ಮನುಸ್ಮೃತಿ, ಕನ್ಯಾಶುಲ್ಕ, ನಿಯೋಗ ಪದ್ದತಿ, ಸಂಘ, ವಿಷಯವಾಸನೆ.

ಭಾರತದಲ್ಲಿ ಮನುವಿನ ಧರ್ಮ ಸೂತ್ರದ ನಿಯಮಗಳಿಂದ ನರಳಿಹೋಗಿದ್ದ ಶೂದ್ರರು, ಅಸ್ಪೃಶ್ಯರು ಮತು ಮಹಿಳೆಯರು ಬುದ್ಧನು ರಚಿಸಿದ ಬೌದ್ಧ ಧರ್ಮದಲ್ಲಿ ಉನ್ನತಿಯನ್ನು, ಸಮಾನತೆಯನ್ನು ಪಡೆದಿದ್ದರು. ಬೌದ್ಧ ಧರ್ಮಕ್ಕೆ ಕೆಲವು ಕಾರಣಗಳನ್ನು ಆರೋಪಿಸಿ ಟೀಕಿಸಲಾಗುತ್ತಿದೆ. ಅದರಲ್ಲಿ ಕಾರಣ – 1. ತನ್ನ ಹೆಂಡತಿಯಾದ ಯಶೋಧರೆಯನ್ನು ಕಾರಣವಿಲ್ಲದೆ, ಯಶೋಧರೆಗೆ ಗೊತ್ತಿಲ್ಲದೆ ತೊರೆದು ಬಂದಿದ್ದಾನೆ. ಕಾರಣ – 2. ಬುದ್ಧನು ತನ್ನ ಬೌದ್ಧ ಸಂಘದಲ್ಲಿ ಮಹಿಳೆಯರನ್ನು ಭಿಕ್ಷುಣಿಯರನ್ನಾಗಿ ಸೇರಿಸಿಕೊಳ್ಳಲು ಒಪ್ಪಲಿಲ್ಲ. ಕಾರಣ – 3. ಮಹಿಳೆಯರ ವಿಚಾರವಾಗಿ ಜಾಗ್ರತೆಯಿಂದಿರಬೇಕು ಎಂದು ತನ್ನ ಸಂಘದವರಿಗೆ ಹೇಳುತ್ತಿದ್ದನು. ಡಾ. ಬಿ.ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳು ಸಂ.

20 ರಲ್ಲಿ ಈ ಉಲ್ಲೇಖವಿದೆ. ಈವ್ಸ್ ವೀಕ್ಲಿಯಲ್ಲಿ 1950 ಜನವರಿ 21 ರಂದು “ನಮ್ಮ ಹೊಸ ಗಣರಾಜ್ಯ” ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಲೇಖನದಲ್ಲಿ ಹೀಗೆ ಹೇಳಲಾಗಿದೆ. ಯುರೋಪಿಗಿಂತ ಬಹಳ ಹಿಂದೆಯೆ ಭಾರತದಲ್ಲಿ ಸ್ತ್ರೀಯರನ್ನು ರಾಜತಂತ್ರ್ಯದಲ್ಲಿ ದಾಳವನ್ನಾಗಿ ಬಳಸಿಕೊಳ್ಳಲಾಗುತ್ತಿತ್ತು. ರಾಮಾಯಣ, ಮಹಾಭಾರತದಲ್ಲಿ ಇಂತಹ ಹಲವಾರು ಪ್ರಕರಣ ಇವೆ. ಹಾಗೆಯೇ ಮುಂದುವರೆದು ಮತ್ತೊಂದು ಆಶ್ಚರ್ಯಕರವಾದ ಹೇಳಿಕೆಯನ್ನು ನೀಡಿದ್ದಾರೆ. ಅದನ್ನು ನಾಲ್ಕನೆಯ ಕಾರಣವಾಗಿ ನೋಡಬಹುದು. ಕಾರಣ – 4. ಬೌದ್ಧವಾದವು ಸ್ತ್ರೀಯರನ್ನು ಹಿನ್ನೆಲೆಗೆ ತಳ್ಳಿತು ಎಂಬುದು.

ಅಂಬೇಡ್ಕರ್ ಅವರು ಅದಕ್ಕೆ ಪ್ರತಿಕ್ರಿಯೆಯಾಗಿ “ಹಿಂದೂ ಹಾಗೂ ಬೌದ್ಧ ಧರ್ಮದಲ್ಲಿ ಮಹಿಳೆಯ ಸ್ಥಾನ” ಎಂಬ ಲೇಖನದಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ. “ನಾನು ಬೌದ್ಧರ ಪವಿತ್ರ ಗ್ರಂಥಗಳನ್ನು, ಬೌದ್ಧರ ಉಪದೇಶಗಳನ್ನು ಪರಿಶೀಲಿಸಿದ ಮೇಲೂ ನನಗೆ ಸ್ತ್ರೀಯರ ಬಗ್ಗೆ ಇರುವ ಈ ವಿಶೇಷ ವಾದವನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಅದರ ಬದಲಿಗೆ ನನಗೆ ದೊರಕಿದ್ದು ಮಾನವ ಜನಾಂಗದ ಬಗ್ಗೆ ಮಾತ್ರ. ನಾಲ್ಕು ಉದ್ದಾಮ ಸತ್ಯಗಳು ಅವಲಂಬಿತ ಉಗಮದ ಸೂತ್ರ ಮತ್ತು ವಿಮುಕ್ತಿಯ ಎಂಟು ಬಗೆಯ ಮಾರ್ಗಗಳು–ಪುರುಷ ಮತ್ತು ಸ್ತ್ರೀಯರ ನಡುವಿನ ಬೇಧಗಳನ್ನು ಗಣಿಸುವುದಿಲ್ಲ ಎಂದು.

ಮೊದಲೇ ಹೇಳಿದಂತೆ ಮನುಸ್ಮೃತಿಯಿಂದ ನಲುಗಿ ಹೋಗಿದ್ದ ಸ್ತ್ರೀಯರು ತಮ್ಮ ಬಿಡುಗಡೆಗಾಗಿ ಹಾತೊರೆಯುತ್ತಿದ್ದರು. ಅದಕ್ಕೆ ಮಾರ್ಗವನ್ನು ತೋರಿಸಿದವನು ಬುದ್ಧ. ಮಹಾಭಾರತ ಮತ್ತು ರಾಮಾಯಣ ಭಾರತದ ಮಹಾಕಾವ್ಯಗಳು ಎಂದು ಪರಿಗಣಿಸಲಾಗುತ್ತಿದೆ. ಈ ಕೃತಿಗಳಲ್ಲಿ ಮಹಿಳೆಯರ ಬಗ್ಗೆ ಉಲ್ಲೇಖಿತಗೊಂಡಿರುವ ಮನು ಪ್ರಣೀತ ಅಭಿಪ್ರಾಯಗಳನ್ನು ಗಮನಿಸದೆ ಮುಂದುವರೆದರೆ ಈ ಲೇಖನದ ಉದ್ದೇಶ ತಿಳಿಯುವುದಿಲ್ಲ.

ಉತ್ತರ ವೇದಗಳ ಕಾಲದಲ್ಲಿ ಕೆಲವು ಸ್ತ್ರೀಯರು ಮೈತ್ರೇಯಿ, ಗಾರ್ಗಿ, ರೂಪಾಲಿ ವೇದಾಧ್ಯಯನ, ಯಜ್ಞಯಾಗಾದಿಗಳಲ್ಲಿ ಭಾಗವಹಿಸುತ್ತಿದ್ದರು. ಪೂರ್ವ ವೇದಗಳಲ್ಲಿ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಸ್ತ್ರೀಯರಿಗೆ ನಿರ್ಬಂಧಿಸಲಾಯಿತು. ಸ್ತ್ರೀಗೆ ಸಂಸ್ಕಾರವನ್ನು ವೇದ ಮಂತ್ರೋಚ್ಚಾರಣೆ ಇಲ್ಲದೆ ಮಾಡಬೇಕು. ಹೆಂಡತಿಗೆ ಗಂಡನು ಹೊಡೆಯಬಹುದು. ಗಂಡನ ಅನುಮತಿಯಿಲ್ಲದೆ ಯಜ್ಞ, ವ್ರತ, ಉಪವಾಸಗಳನ್ನು ಮಾಡಬಾರದು. ವೇದಗಳು ವಿಧಿಸಿರುವ ಯಜ್ಞಗಳನ್ನು ಸ್ತ್ರೀ ಮಾಡಬಾರದು. ಇಂತಹ ಗುಲಾಮಿತನ, ಗೌರವ ಹರಣ ಮಾಡಿರುವ ಧರ್ಮವನ್ನು ಶ್ರೇಷ್ಠ ಎಂದು ಹೇಳಲಾಗುತ್ತಿದೆ. ಪುರುಷನಷ್ಟೇ ಸಂಖ್ಯೆ ಇರುವ ಸ್ತ್ರೀಯರು ಇದನ್ನು

ಮರು ಮಾತಿಲ್ಲದೆ ಒಪ್ಪಿ ಬದುಕುತ್ತಿರುವುದು ಖೇದದ ಸಂಗತಿ.

ಮನು ತನ್ನ ಸ್ಮೃತಿಯಲ್ಲಿ, ಸ್ತ್ರೀಯರಿಗೆ ಅತಿ ಕಾಮುಕತನವಿರುತ್ತದೆ. ಇಂತಹ ಕಾಮುಕತನದಿಂದ ಸ್ತ್ರೀಯರು ತಮ್ಮ ಗಂಡಂದಿರ ಮೇಲೆ ನಿಷ್ಠೆಯಿಲ್ಲದವರಾಗುತ್ತಾರೆ. ಪುರುಷನನ್ನು ಮೋಹಗೊಳಿಸುವುದೇ ಸ್ತ್ರೀಯ ಸ್ವಭಾವ, ಪುರುಷನು ತನ್ನ ತಾಯಿ, ಸಹೋದರಿ, ಮಗಳು ಇವರ ಜೊತೆ ಒಂಟಿಯಾಗಿರಬಾರದು. ಪ್ರೀತಿ, ಕಾಮ, ಕ್ರೋಧ, ಕಪಟ, ದ್ರೋಹ, ದುರ್ವರ್ತನೆ, ಮನೋವಿಕಾರಗಳು ಸ್ತ್ರೀಯ ಜನ್ಮಸಿದ್ಧವುಗಳು ಎಂದು ಹೇಳುತ್ತಾನೆ. ಸ್ತ್ರೀಯರ ಸ್ವಾತಂತ್ರ್ಯದ ಬಗ್ಗೆ ಘಂಟಾಘೋಷವಾಗಿ "ನಾ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂದು ಹೇಳುತ್ತಾನೆ. ಹಗಲು ರಾತ್ರಿ ಹೆಂಗಸರನ್ನು ಗಂಡಸರು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು. ಹುಡುಗಿಯಾಗಲೀ, ಹೆಂಗಸಾಗಲೀ, ಮುದುಕಿಯಾಗಲೀ ತನ್ನ ಮನೆಯಲ್ಲಾದರೂ ಏನನ್ನೂ ಸ್ವಾತಂತ್ರ್ಯವಾಗಿ ಮಾಡಬಾರದು. ಬಾಲ್ಯದಲ್ಲಿ ತಂದೆಯ, ಯೌವ್ವನದಲ್ಲಿ ಗಂಡನ, ಗಂಡನು ಮೃತನಾಗಿದ್ದರೆ ಪುತ್ರರ ಅಧಿನದಲ್ಲಿ ಸ್ತ್ರೀ ಇರಬೇಕು ಅವಳು ಸ್ವತಂತ್ರಳಾಗಿರಬಾರದು. ಸ್ತ್ರೀಗೆ ದಾಂಪತ್ಯ ವಿಚ್ಛೇದನದ ಹಕ್ಕು ಇಲ್ಲ. ಇದಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯ ಹರಣವನ್ನು ಮನು ತನ್ನ ಸ್ಮೃತಿಯಲ್ಲಿ ಮಾಡಿದ್ದಾನೆ. ಸ್ತ್ರೀಯನ್ನು ಅಧೋಗತಿಗಿಳಿಸಿದ್ದಾನೆ.

ಮಹಾಭಾರತದಲ್ಲಿ ಬರುವ ಯಯಾತಿಯು ತನ್ನ ಮಗಳಾದ ಮಾಧವಿಯನ್ನು ಕನ್ಯಾ ಶುಲ್ಕ ಪಡೆಯಲು ಗಾಲವನಿಗೆ ದಾನ ಮಾಡುತ್ತಾನೆ. ಕನ್ಯಾಶುಲ್ಕದ ರೂಪದಲ್ಲಿ ನಾಲ್ಕು ಜನ ಪುರುಷರ ಕಾಮ ತೃಷೆಗೆ ಬಲಿಯಾಗುತ್ತಾಳೆ. ಇಲ್ಲಿ ಹೆಣ್ಣನ್ನು ದಾನವಾಗಿ, ವಸ್ತುಗಳನ್ನು ಪಡೆಯಲು ವಿನಿಮಯ ಸಾಧನವಾಗಿ ಬಳಸಲಾಗುತ್ತಿತ್ತು ಎಂಬುದು ತಿಳಿಯುತ್ತದೆ. ಮಾಧವಿಗೆ ವರವನ್ನು ನೀಡುವ ಮೂಲಕ ಪುರುಷನು ತಪ್ಪುಗಳಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಾನೆ.

ಕುಂತಿಯು ಕನ್ಯೆಯಾಗಿದ್ದಾಗಲೇ ಕರ್ಣನಿಗೆ ಜನ್ಮಕೊಡುತ್ತಾಳೆ. ಸಮಾಜವನ್ನು ಎದುರಿಸಲು ಧೈರ್ಯವಿಲ್ಲದೆ ನದಿಯಲ್ಲಿ ಬಿಟ್ಟು ಬಿಡುತ್ತಾಳೆ. ಅದೇ ಕುಂತಿ ಮದುವೆಯಾದ ಮೇಲೆ ಮಂತ್ರಗಳ ಸಹಾಯದಿಂದ ಮಕ್ಕಳನ್ನು ಪಡೆಯುತ್ತಾಳೆ. ಇದನ್ನು ನಿಯೋಗ ಪದ್ಧತಿ ಎಂದು ಸಮಾಜಶಾಸ್ತ್ರಜ್ಞರು ಕರೆದಿದ್ದಾರೆ. ಮಾದ್ರಿಗೂ ಸಹ ಮಕ್ಕಳನ್ನು ಹೆರಲು ಕುಂತಿ ಮಂತ್ರಗಳನ್ನು ಹೇಳಿಕೊಡುತ್ತಾಳೆ. ವಂಶವನ್ನು ಬೆಳೆಸಲು ಕುಂತಿಯಂತೆ ಪೂರ್ವಿಕ ಸ್ತ್ರೀಯರು ವ್ಯಾಸನನ್ನು ಅವಲಂಬಿಸಿದ್ದನ್ನು ಕಾಣಬಹುದು. ಹೆಣ್ಣು ಮನು ಪ್ರಣೀತ ಧರ್ಮದಲ್ಲಿ ಸ್ವಾತಂತ್ರ್ಯವಿಲ್ಲದ ಪಶುವಿಂತೆ ಜೀವನ ನಡೆಸಿದ್ದಾಳೆ.

ದ್ರೌಪದಿ ಐವರನ್ನು ಮದುವೆಯಾಗಿದ್ದರು ಪಂಚ ಪತೀವ್ರತೆಯರಲ್ಲಿ ಒಬ್ಬಳು. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ದ್ರೌಪದಿಯನ್ನು ಔನತ್ಯಕ್ಕೇರಿಸಿ ಈ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸದಂತೆ ಮಾಡಲಾಗಿದೆ. ದ್ರೌಪದಿಯ ಮನಸ್ಸಿನಲ್ಲಿ ಐದು ಜನ ಗಂಡಂದಿರ

ಜೊತೆಗೆ ಆರನೆಯವನಾಗಿ ಕರ್ಣನೂ ಇದ್ದಿದ್ದರೆ ಚನ್ನಾಗಿತ್ತು ಎಂಬ ಭಾವನೆಯಿತ್ತು ಎಂದು ಹೇಳುವ ಮೂಲಕ ದ್ರೌಪದಿಯ ಚಾರಿತ್ರ್ಯ ವಧೆಯನ್ನು ಮಾಡಲಾಗಿದೆ. ದ್ರೌಪದಿಯ ಅನುಮತಿಯಿಲ್ಲದೆ ಜೂಜಿನಲ್ಲಿ ಪಣಕ್ಕಿಟ್ಟು ಸೋಲುವ ಗಂಡಸರನ್ನು ಈ ಸಮಾಜದಲ್ಲಿ ಆರಾಧಿಸಲಾಗುತ್ತದೆ.

ರಾಮಾಯಣದಲ್ಲಿ ಬರುವ ಮಂಥರೆ, ಕೈಕೇಯಿ, ಸೀತೆ, ಶೂರ್ಪನಖಿಯನ್ನು ಪಿತೃ ಪ್ರಧಾನ ವ್ಯವಸ್ಥೆಯು ತನ್ನ ಚೌಕಟ್ಟಿನಲ್ಲಿ ಬಂಧಿಸಿ ನಿಕಷಕ್ಕೆ ಒಡ್ಡುತ್ತದೆ. ಕುರೂಪಿಯಾದ ಮಂಥರೆ ಮತ್ತು ಸೌಂದರ್ಯದ ಖನಿಯಾದ ಕೈಕೇಯಿ ಇಬ್ಬರೂ ಸೇರಿಕೊಂಡು ಅತಿಯಾಸೆಯಿಂದ ರಾಮನು ಕಾಡಿಗೆ ಹೋಗುವಂತೆ ಮಾಡಿದರು ಎಂದು ಆರೋಪಿಸಲಾಗಿದೆ. ಕೈಕೇಯಿಯ ಸೌಂದರ್ಯಕ್ಕೆ ಮೋಹಗೊಂಡು ದಶರಥನು ಕೊಟ್ಟ ಮಾತನ್ನು ವಿಸ್ಮೃತಿಗೆ ತಳ್ಳಲಾಗಿದೆ. ರಾಮನ ಮೇಲೆ ಮಮಕಾರ ಉಕ್ಕಿ ಬಂದು ಕೈಕೇಯಿಯನ್ನು ಇನ್ನಿಲ್ಲದಂತೆ ಹೀಯಾಳಿಸುವ ದಶರಥ ತಾನು ಮಾಡಿದ ತಪ್ಪಿಗೆ ಕೈಕೇಯಿಯನ್ನು ಹೊಣೆಗಾರಳನ್ನಾಗಿ ಮಾಡುತ್ತಾನೆ. ರಾಜನಾದವನಿಗೆ ಇರಬೇಕಾದ ದಕ್ಷತೆಯೂ ಇಲ್ಲದೆ ಹೆಣ್ಣಿಗಾಗಿ ಕಾಮವಾಂಛೆಯಿಂದ ಬಳಲುವ ಮುದುಕನಾದ ದಶರಥ ಯಾವ ನೈತಿಕತೆಯನ್ನಿಟ್ಟುಕೊಂಡು ಕೈಕೇಯಿಯನ್ನು ದೂಷಿಸುತ್ತಾನೆ? ಎಂಬ ಪ್ರಶ್ನೆಗೆ ಉತ್ತರವಿಲ್ಲ.

ರಾವಣನ ಸೋದರಿ ಶೂರ್ಪನಖಿಯು ತನ್ನ ಪ್ರೇಮವನ್ನು ನಿವೇದನೆ ಮಾಡಿದಾಗ ರಾಮ ಮತ್ತು ಲಕ್ಷ್ಮಣ ತೋರುವ ನೀಚತನಕ್ಕೆ ಎಣೆಯಿಲ್ಲ. ಶೂರ್ಪನಖಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಾಗ ಸಂಯಮದಿಂದ ಅವಳಿಗೆ ತಿಳುವಳಿಕೆ ಹೇಳಿ ಕಳಿಸಬಹುದಾಗಿತ್ತು ಅದರ ಬದಲು ಆಕೆಯ ಮೂಗನ್ನು ಕತ್ತರಿಸಿ, ವಿರೂಪಗೊಳಿಸಿ ಸಂಭ್ರಮಿಸುತ್ತಾರೆ. ಸಂಯಮ ಮತ್ತು ತಿಳುವಳಿಕೆ ಇಲ್ಲದ ಇವರ ಜೊತೆಗೆ ಸೀತೆ ಮತ್ತು ಊರ್ಮಿಳೆ ಬದುಕಿದ್ದಾದರೂ ಹೇಗೆ?

ಸೀತೆಯು ಶೀಲವಂತಳು ಎಂದು ಸಾಬೀತು ಮಾಡಲು ಅಗ್ನಿಪ್ರವೇಶ ಮಾಡಬೇಕಾಯ್ತು. ಸೀತೆ ಇಲ್ಲದ ಸಮಯದಲ್ಲಿ ರಾಮನು ಪರಿಶುದ್ಧನಾಗಿದ್ದನೇ? ರಾಮನಿಗೆ ಶೀಲದ ಪರೀಕ್ಷೆ ಇಲ್ಲ. ಮನುವಿನ ನ್ಯಾಯಾಲಯದಲ್ಲಿ ಯಾವಾಗಲು ಅಪರಾಧಿ ಸ್ತ್ರೀ ಮಾತ್ರ. ಇಷ್ಟೆಲ್ಲಾ ತಾರತಮ್ಯಗಳಿಂದ ಕೂಡಿರುವ ಧರ್ಮವನ್ನು ಪ್ರಶ್ನಾತೀತವಾಗಿ ಒಪ್ಪಿಕೊಳ್ಳಲು ಏರಿಕೆ ಮಾಡಲಾಗುತ್ತಿತ್ತು.

ಈಗ ಬುದ್ಧನ ಧಮ್ಮದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ನೋಡಿದಾಗ, ಬುದ್ಧ ತನ್ನ ಧಮ್ಮದಲ್ಲಿಯೇ ಆಗಲಿ, ಸಂಘದಲ್ಲಿಯೇ ಆಗಲಿ ಸ್ತ್ರೀಯರನ್ನೂ ಎಂದೂ ಕೀಳಾಗಿ ನೋಡಲೇ ಇಲ್ಲ. ಪುರುಷನಿಗೆ ದತ್ತವಾದ ಎಲ್ಲಾ ಸ್ವಾತಂತ್ರ್ಯವೂ ಸ್ತ್ರೀಗೆ ಇರಬೇಕೆಂದು ಬಯಸಿದನು. ಬುದ್ದನು ಮಹಿಳೆಯು ತನ್ನ ಗಂಡನನ್ನು ದೇವರೆಂದು

ಪೂಜಿಸಬೇಕಿಲ್ಲ, ಇದರಿಂದ ಗಂಡನು ಊಟ ಮಾಡಿದ ನಂತರ ಸ್ತ್ರೀ ಊಟ ಮಾಡಬೇಕು ಎಂಬ ನಿಯಮವನ್ನು ತೆಗೆದುಹಾಕಿದನು. ಸ್ತ್ರೀಯು ಗಂಡನು ಸತ್ತ ನಂತರ ಹೀನವಾಗಿ ಬದುಕಬೇಕು, ಸಹಗಮನ ಮಾಡಬೇಕೆಂಬುದಾಗಿ ಬುದ್ಧನು ಹೇಳಿಲ್ಲ. ಬದಲಾಗಿ ಹೆಣ್ಣಿಗೆ ಸ್ವಾತಂತ್ರ್ಯವನ್ನು ನೀಡಿದ್ದಾನೆ. ತನ್ನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳುವ ಗಂಡನನ್ನು ತ್ಯೆಜಿಸುವ, ಗಂಡನ ಮರಣಾನಂತರ ಸಾಮಾಜಿಕವಾಗಿ ಪರಿತ್ಯಕ್ತಳಾಗದೆ, ಬಯಸಿದರೆ ಮರು ಮದುವೆಯಾಗುವ ಅವಕಾಶವು ಸ್ತ್ರೀಗೆ ಇದೆ ಎಂದು ಬುದ್ದನು ಹೇಳಿದ್ದಾನೆ.

**ಮೊದಲು ಹೇಳಿರುವ ಕಾರಣಗಳನ್ನು ಗಮನಿಸೋಣ:**

**ಕಾರಣ–1:** ತನ್ನ ಹೆಂಡತಿಯಾದ ಯಶೋಧರೆಯನ್ನು ಕಾರಣವಿಲ್ಲದೆ, ಯಶೋಧರೆಗೆ ಗೊತ್ತಿಲ್ಲದೆ ತೊರೆದು ಬಂದಿದ್ದಾನೆ. ಬುದ್ದನ ಬಗ್ಗೆ ಎಂತಹ ವಿಡಂಬನೆ ಮತ್ತು ಭ್ರಾಮಕತೆಯನ್ನು ಸೃಷ್ಟಿಸಲಾಗಿದೆಯೆಂದರೆ, "ಯಶೋಧರೆಗೆ ಹೇಳದೆ ರಾಹುಲನ ಮುಖವನ್ನು ನೋಡದೆ ಅರಮನೆಯನ್ನು ಬಿಟ್ಟು ಬಂದ". ಆದರೆ ರೋಹಿಣಿ ನದಿ ನೀರಿನ ಹಂಚಿಕೆಯ ವಿವಾದದಿಂದಾಗಿ ಯುದ್ದದ ತೀರ್ಮಾನವಾದಾಗ ಯುದ್ದ ಮಾಡಲು ಒಪ್ಪದೆ ಕುಟುಂಬ ತೊರೆದು ಪರಿವ್ರಾಜಕನಾಗಲು ಬುದ್ದ ನಿರ್ಧರಿಸಿದ. ಈ ವಿಷಯವನ್ನು ಯಶೋಧರೆಯ ಬಳಿ ಹೇಳಿದಾಗ ಯಶೋಧರೆ ಆಘಾತಗೊಳ್ಳಲಿಲ್ಲ. ಬದಲಿಗೆ "ನಾನಾದರೂ ಕೋಲಿಯರ ಮೇಲೆ ಯುದ್ದ ಮಾಡಲು ಒಪ್ಪುತ್ತಿರಲಿಲ್ಲ" ಎಂದು ಹೇಳಿ, ಮಗ ರಾಹುಲನು ಇರದಿದ್ದರೆ ನಾನು ಪರಿವ್ರಾಜಕ ಧರ್ಮವನ್ನು ಸ್ವೀಕರಿಸುತ್ತಿದ್ದೆ ಎಂದಳು. ಗೌತಮ ಸಿದ್ದಾರ್ಥ ರಾಹುಲನನ್ನು ಪಿತೃ ವಾತ್ಸಲ್ಯದ ತುಂಬು ನೋಟದಿಂದ ನೋಡಿ ಅಲ್ಲಿಂದ ಹೊರ ನಡೆದ. ಈ ಘಟನೆಗೆ ಕಪೋಲ ಕಲ್ಪಿತ ವಿಚಾರಗಳನ್ನು ಸೇರಿಸಿ ಅದನ್ನೇ ಸತ್ಯವೆಂದು ನಂಬಿಸುವ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿದೆ ಎಂದರೆ ತಪ್ಪಾಗಲಾರದು.

**ಕಾರಣ–2:** ಬುದ್ಧನು ತನ್ನ ಬೌದ್ಧ ಸಂಘದಲ್ಲಿ ಮಹಿಳೆಯರನ್ನು ಭಿಕ್ಷುಣಿಯರನ್ನಾಗಿ ಸೇರಿಸಿಕೊಳ್ಳಲು ಒಪ್ಪಲಿಲ್ಲ. ಬುದ್ಧನು ಆರಂಭದಲ್ಲಿ ಸ್ತ್ರೀಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಒಪ್ಪಿರಲಿಲ್ಲ ಎಂಬುದು ಸತ್ಯವಾದರೂ ಆನಂತರದಲ್ಲಿ ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳುತ್ತಾನೆ. ಬುದ್ದನಿಗೆ ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳಲು ತಡಮಾಡಿರುವುದಕ್ಕೆ ಎರಡು ಕಾರಣಗಳಿದ್ದವು. 1. ಪುರುಷರಿಗು–ಸ್ತ್ರೀಯರಿಗೂ ಪ್ರತ್ಯೇಕ ಸಂಘವಿರಬೇಕೆ ಅಥವಾ ಒಂದೇ ಇರಬೇಕೆ. 2. ಸ್ತ್ರೀಯರು ಮತ್ತು ಪುರುಷರನ್ನು ಒಟ್ಟಿಗೆ ಇರಿಸಿದರೆ ಬ್ರಹ್ಮಚರ್ಯ ಪೂರ್ತಿ ಹಾಳಗುತ್ತದೆ ಎಂಬುದು. ಕೊನೆಗೆ ಸ್ತ್ರೀ ಮತ್ತು ಪರುಷರು ವಿಷಯವಾಸನೆಗಳಿಗೆ ಬಲಿಯಾಗುತ್ತಾರೆ, ಅವರನ್ನು ದಾಸ್ಯದತ್ತ ಕೊಂಡೊಯ್ಯುತ್ತದೆ ಎಂದು ಸ್ತ್ರೀ ಮತ್ತು ಪರುಷರಿಗೆ ಎರಡು ಪ್ರತ್ಯೇಕ ಸಂಘಗಳಿರಬೇಕು ಎಂದು ನಿರ್ಧರಿಸಿ, ಅವುಗಳಿಗೆ ವೇಗ ನಿರೋಧಕಗಳಿರಬೇಕೆಂಬ ನಿಯಮವನ್ನು ತಳೆದನು. ಒಂದು ವೇಳೆ ಬುದ್ದನ್ನು ಸ್ತ್ರೀಯರ ವಿಷಯವಾಗಿ ತಪ್ಪು ನಿಲುವು ತಳೆದಿದ್ದರೆ, ಸ್ತ್ರೀಯರಿಗೆ ಸಂಘಕ್ಕೆ ಪ್ರವೇಶ ನೀಡುತ್ತಿರಲಿಲ್ಲ.

**ಕಾರಣ–3:** ಮಹಿಳೆಯರ ವಿಚಾರವಾಗಿ ಜಾಗ್ರತೆಯಿಂದಿರಬೇಕು ಎಂದು ತನ್ನ ಸಂಘದವರಿಗೆ

ಹೇಳುತ್ತಿದ್ದನು. ಈ ಮಾತನ್ನು ಬುದ್ದನು ತನ್ನ ಶಿಷ್ಯರಿಗೆ ಯಾವಾಗಲೂ ಹೇಳುತ್ತಿದ್ದ ಎಂದು ಆರೋಪಿಸಲಾಗಿದೆ. ವಾಸ್ತವದಲ್ಲಿ ಬುದ್ದನು ಪುರುಷರಿಗೆ ಮಹಿಳೆಯರ ವಿಚಾರವಾಗಿ ಜಾಗ್ರತೆಯಿಂದಿರಬೇಕು ಎಂದು ತನ್ನ ಸಂಘದ ಭಿಕ್ಕುಗಳಿಗೆ ಹೇಳುತ್ತಿದ್ದಂತೆಯೆ, ಮಹಿಳೆಯರಿಗೂ ಪುರುಷರ ವಿಚಾರವಾಗಿ ಜಾಗ್ರತೆಯಿಂದಿರಬೇಕು ಎಂದು ಹೇಳುತ್ತಿದ್ದನು. ಅಷ್ಟೇ ಅಲ್ಲದೆ ಈ ಮಾತನ್ನು ಬುದ್ದ ಎಲ್ಲಾ ಸ್ತ್ರೀಯರಿಗೂ, ಪುರುಷರಿಗೂ ಹೇಳುತ್ತಿರಲಿಲ್ಲ, ಬದಲಿಗೆ ಸಂನ್ಯಾಸಿಗಳಿಗೆ ಮಾತ್ರ ಹೇಳುತ್ತಿದ್ದನು.

**ಕಾರಣ–4:** ಬೌದ್ಧವಾದವು ಸ್ತ್ರೀಯರನ್ನು ಹಿನ್ನೆಲೆಗೆ ತಳ್ಳಿತು ಎಂಬುದು. ಗೌತಮ ಸಿದ್ಧಾರ್ಥನು ಅರಮನೆಯಲ್ಲಿದ್ದಾಗಾಗಲೀ, ಸಂಘವನ್ನು ಕಟ್ಟಿದ ನಂತರವಾಗಲೀ ಸ್ತ್ರೀಯರನ್ನು ಎಂದೂ ಕೆಟ್ಟದಾಗಿ ನೋಡುತ್ತಿರಲಿಲ್ಲ. ಅರಮನೆಯ ವೇಶ್ಯಾಗೃಹದ ಸ್ತ್ರೀಯರನ್ನು ಕಾಮದ ದೃಷ್ಠಿಯಲ್ಲಿ ನೋಡಿದವನಲ್ಲ. ಯಶೋಧರೆಯೊಂದಿಗಿನ ದೈಹಿಕ ಸಂಬಂಧವೇ ನ್ಯಾಯಯುತವಾದುದು ಎಂದು ನಿರ್ಧರಿಸಿದ್ದ. ವೇಶ್ಯಾಗೃಹದಲ್ಲಿದ್ದ ವೇಶ್ಯೆಯರ ಬಗ್ಗೆ ಅಂತರ್ಮುಖಿಯಾಗಿ ಚಿಂತಿಸುತ್ತಿದ್ದ. ಸ್ತ್ರೀಯರನ್ನು ಎಂದೂ ಗುಲಾಮರಂತೆ ನೋಡುತ್ತಿರಲಿಲ್ಲ.

ಬುದ್ದನು ಸ್ತ್ರೀಯರಿಗಾಗಿ ಸಂಘವನ್ನು ತೆರೆದಾಗ ಮೊದಲು ದೀಕ್ಷೆ ಕೊಟ್ಟಿದ್ದು ಮಲ ತಾಯಿಯಾದ ಪ್ರಜಾಪತಿ ಗೌತಮಿಗೆ. ಗೌತಮಿಗೆ ದೀಕ್ಷೆ ಕೊಡುವ ಮೊದಲು ಕೋಸಂಬಿಯಲ್ಲಿ ಗರ್ಭಿಣಿ ಸ್ತ್ರೀಯೊಬ್ಬಳು ಬುದ್ದನ ಹತ್ತಿರ ಹೀಗೆ ಹೇಳುತ್ತಾಳೆ. “ಹುಟ್ಟುವ ಮಗು ಗಂಡಾಗಲೀ, ಹೆಣ್ಣಾಗಲೀ ಅದು ಭಗವಾನರ, ಅವರ ಧಮ್ಮ, ಅವರ ಸಂಘದ ಅನುಯಾಯಿಯಾಗುತ್ತದೆ. ಮತ್ತೆ ಭಗವಾನರು ನನ್ನ ಮಗು ಬದುಕಿರುವವರೆಗೂ ಅದನ್ನು ಅನುಯಾಯಿಯಾಗಿ ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ”. ಬುದ್ದನ್ನು ಲಿಂಗ ತಾರತಮ್ಯ ಮಾಡುತ್ತಿದ್ದನೇ? ಎಂಬ ಪ್ರಶ್ನೆಗೆ ಇದಕ್ಕಿಂತಲೂ ಉತ್ತರ ಸಿಗಲಾರದು.

ವೈಶಾಲಿಯ ಆಮ್ರಪಾಲಿ ಆಸ್ಥಾನದ ನರ್ತಕಿ ಹಾಗೂ ವೇಶ್ಯೇಯಾಗಿದ್ದವಳು. ಆಮ್ರಪಾಲಿಗೆ ಸೇರಿದ ಮಾವಿನ ತೋಟದಲ್ಲಿ ತಂಗಿದ್ದ ಬುದ್ದನನ್ನು ಊಟಕ್ಕೆ ಆಹ್ವಾನಿಸಿದಳು. ನಂತರ ಅಲ್ಲಿಗೆ ಬಂದ ಲಿಚ್ಛವಿಗಳ ರಾಜ ಬುದ್ದನನ್ನು ಊಟಕ್ಕೆ ಆಹ್ವಾನಿಸಿದಾಗ “ಈಗಾಗಲೇ ನಾನು ಆಮ್ರಪಾಲಿಯ ಜೊತೆಗೆ ಊಟ ಮಾಡುವುದಾಗಿ ಹೇಳಿದ್ದೇನೆ” ಎಂದು ಬುದ್ದನು ರಾಜನ ಆಹ್ವಾನವನ್ನು ತಿರಸ್ಕರಿಸಿ ಆಮ್ರಪಾಲಿಗೆ ಮನ್ನಣೆ ನೀಡುತ್ತಾನೆ. ಇಲ್ಲಿ ಬುದ್ದನಿಗೆ ಆಮ್ರಪಾಲಿ ಸ್ತ್ರೀ ಎಂಬುದಾಗಲೀ, ಆಕೆಯ ವೃತ್ತಿಯಾಗಲೀ, ಜಾತಿಯಾಗಲೀ ಮಹತ್ವವಾದುದ್ದಲ್ಲ. ಇದನ್ನೇ ಸಂಘದಲ್ಲಿಯೂ ಜಾರಿಗೆ ತಂದಿದ್ದು. ನಂತರದಲ್ಲಿ ಆಮ್ರಪಾಲಿಯು ಧಮ್ಮ ದೀಕ್ಷೆ ಪಡೆದು ಸಂಘವನ್ನು ಸೇರುತ್ತಾಳೆ.

ಸುಜಾತ, ವಿಶಾಖ, ಧನಂಜನನಿ, ಮಲ್ಲಿಕಾ ಈ ಸ್ತ್ರೀಯರು ಬುದ್ದನ ಧಮ್ಮದತ್ತ

ಆಕರ್ಷಿತರಾಗುತ್ತಾರೆ. ಸುಜಾತ ಬುದ್ದನಿಗೆ ಜ್ಞಾನೋದಯ ಆಗುವವರೆಗೂ ಸ್ಥಳ ಮತ್ತು ಆಹಾರವನ್ನು ನೀಡುತ್ತಾ ಬುದ್ದನನ್ನು ಉಪಚರಿಸುತ್ತಾಳೆ. ವಿಶಾಖ ತನ್ನ ಮಾವನನ್ನು, ಧನಂಜನನಿ ತನ್ನ ಗಂಡನನ್ನು ಭಿಕ್ಷುವಾಗಿ ಸಂಘ ಸೇರಲು ಪ್ರೇರಣೆಯಾಗುತ್ತಾರೆ. ಸುಜಾತಾಳ ಆಹಾರ ಉಪಚಾರ, ವಿಶಾಖಾಳ ನಿಷ್ಠೆ, ಮಲ್ಲಿಕಾಳ ನಿಷ್ಠೆಯು ಪ್ರಶ್ನಾತೀತವಾದುದು.

ಬೌದ್ಧ ಧರ್ಮದಲ್ಲಿ ಸ್ತ್ರೀಯರು ಪುರುಷರಷ್ಟೇ ಸಮಾನರಾಗಿದ್ದರು. ಈಗ ತಕ್ಕಡಿ ಹಿಡಿದು ನೋಡಬೇಕಾದ ಪರಿಸ್ಥಿತಿ ಇದೆ. ಮನುವಿನ ದೃಷ್ಟಿಯ ಸ್ತ್ರೀಗೂ ಬುದ್ದನ ದೃಷ್ಟಿಯಲ್ಲಿ ಸ್ತ್ರೀಗೂ ಸಾಕಷ್ಟು ವ್ಯತ್ಯಾಸಗಳಿವೆ. ಬುದ್ದನು ಸ್ತ್ರೀಯರನ್ನು ಭೋಗದ ವಸ್ತುವಿನಂತೆ ಕಾಣುತ್ತಿರಲಿಲ್ಲ. ಮನುವಿನ ಮಹಿಳೆ “ಇಂದ್ರನು ಗೌತಮ ಮಹರ್ಷಿಯ ಹೆಂಡತಿಯಾದ ಅಹಲ್ಯೆಯನ್ನು ಕಾಮಿಸಿ ಗೌತಮನ ರೂಪದಲ್ಲಿ ಬಂದು ಅಹಲ್ಯೆಯ ಮೇಲೆ ಅತ್ಯಾಚಾರ ಮಾಡುತ್ತಾನೆ ಇಲ್ಲಿ ಅತ್ಯಾಚಾರ ಮಾಡಿದ ಪುರುಷನಾದ ಇಂದ್ರನಿಗೆ ಶಾಪವಿಲ್ಲ ತಪ್ಪಿಲ್ಲದಿದ್ದರೂ ಶಾಪಕ್ಕೆ ಗುರಿಯಾದವಳು ಅಹಲ್ಯೆ. ಇದು ಮನುಸ್ಮೃತಿಯು ಮಹಿಳೆ. ಅಹಲ್ಯೆಗೆ ವೇಷಧರಿಸಿ ಬಂದದ್ದು ಇಂದ್ರನೆಂದು ತಿಳಿಯಲಿಲ್ಲವೆಂದರೆ, ಇಂದ್ರನು ಸ್ಪರ್ಶ ಮಾಡಿದಾಗಲೂ ಗೊತ್ತಾಗಲಿಲ್ಲವೆಂದರೆ ಈಕೆ ಪತಿವ್ರತಿಯಲ್ಲ ಎಂದೂ ದೂಷಿಸಿದ್ದಾರೆ. ಅದೇ ಪುರುಷನು ಇದರಲ್ಲಿ ದೋಷ ಮುಕ್ತನಾಗಿದ್ದಾನೆ”. ಬೌದ್ಧ ಧರ್ಮ ಮತ್ತು ಮಹಿಳೆ ಕುರಿತು ಮಾತನಾಡುವಾಗ ಈ ಮೇಲಿನ ವ್ಯತ್ಯಾಸಗಳನ್ನು ಗುರುತಿಸುವುದು ಅನಿವಾರ್ಯ ಮತ್ತು ಅಗತ್ಯವೂ ಆಗಿದೆ.

**ಪರಾಮರ್ಶನ ಗ್ರಂಥಗಳು:**


1. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–10, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
3. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–17, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
4. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು

ಮತ್ತು ಭಾಷಣಗಳು, ಸಂಪುಟ–18, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.

5. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–19, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
6. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–20, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
7. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–21, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
8. ಅಂಬೇಡ್ಕರ್ ಬಿ. ಆರ್. , (2017), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–22, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
9. ತಾಳ್ತಜೆ ವಸಂತಕುಮಾರ್, (2015), ಬೌದ್ಧಯಾನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
10. ಸರಸ್ವತಿ ದು. , (2022), ನಾವೂ ಇತಿಹಾಸ ಕಟ್ಟಿದ್ದೇವು, ಕವಿ ಪ್ರಕಾಶನ, ಹೊನ್ನಾವರ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.